# ಹಾರ್ಟ್ ರಿದಮ್ ಡಿಸಾರ್ಡರ್



**ಹೃದಯ ಬಡಿತ ಸಮಸ್ಯೆ (ಹಾರ್ಟ್ ರಿದಮ್ ಡಿಸಾರ್ಡರ್) ಎಂದರೆ ವ್ಯಕ್ತಿಯ ಹೃದಯ ಬಡಿತ ಅತ್ಯಂತ ನಿಧಾನ ಅಥವಾ ಅತ್ಯಂತ ವೇಗವಾಗಿ ಆಗುವುದು, ವಿಪರೀತ ಆಯಾಸ, ಪ್ರಜ್ಞೆ ತಪ್ಪುವ ಸಾಧ್ಯತೆಯೂ ಇದೆ.**

■ ಯು.ಎ.

ಹೃದಯಸ್ತಂಭನ, ಹೃದಯ ವೈಫಲ್ಯ, ಹೃದಯಾಘಾತ, ಹೃದಯ ಬಡಿತದಲ್ಲಿ ಏರುಪೇರು, ಕ್ಷೀಣಿಸಿದ ಹೃದಯ, ಹೆಚ್ಚಾದ ಎದೆನೋವು... ಇವೆಲ್ಲವೂ ಹೃದ್ರೋಗದ ವಿವಿಧ ಆಯಾಮಗಳು. ನಮ್ಮ ದೇಹದ ಪ್ರಮುಖ ಅಂಗ, ಗಾತ್ರದಲ್ಲಿ ಒಂದು ಮುಷ್ಟಿಯಷ್ಟಿರುವ ಪುಟ್ಟ ಹೃದಯಕ್ಕೆ ಇಷ್ಟೊಂದು ವಿಧದ ಅಡ್ಡಿ ಆತಂಕಗಳೇ?

ಇತ್ತೀಚೆಗಂತೂ ಅನಿಯಮಿತ ಹೃದಯಬಡಿತ ಅಥವಾ ಹೃದಯ ಬಡಿತದಲ್ಲಿ ಏರುಪೇರು ಯುವಜನರಲ್ಲೇ ಹೆಚ್ಚು ಎಂಬ ಆತಂಕಕಾರಿ ಅಂಶವನ್ನು ವೈದ್ಯಲೋಕ ಹೊರಗೆಡವಿದೆ. ಹಿಂದೆಲ್ಲ ವಯಸ್ಸಾದವರಲ್ಲಿ ಮಾತ್ರ ಹೆಚ್ಚಾಗಿ ಬರುತ್ತಿದ್ದ ಹೃದಯಸ್ತಂಭನ ಈಗೀಗ ಮಕ್ಕಳನ್ನೂ ಕಾಡುತ್ತಿದೆ. ಹೃದಯಸ್ತಂಭನ ಆದರೆ ಮೇಲ್ನೋಟಕ್ಕೆ ಗೊತ್ತಾಗುವುದೇ ಇಲ್ಲ. ಹಾಗಾಗಿ ಹೃದಯದಲ್ಲಿ ತಳಮಳ ಉಂಟಾದ ಕೂಡಲೇ ತಕ್ಷಣ ವೈದ್ಯರನ್ನು ಕಾಣಲೇ ಬೇಕು.

ಮಧುಮೇಹ, ಏರು ರಕ್ತದೊತ್ತಡದ ಪರಿಣಾಮವೇ ಹೃದಯದ ಬಡಿತ ನಿಧಾನವಾಗುವುದು ಅಥವಾ ಏಕಾಏಕಿ ಜಾಸ್ತಿಯಾಗುವುದು. ಇದು ಮುಂದೆ ಅನೇಕ ಸಮಸ್ಯೆಗಳಿಗೆ ನಾಂದಿ ಹಾಡಬಹುದು.

ಏನಿದು ಹೃದಯ ಬಡಿತ ಸಮಸ್ಯೆ?

ಹೃದಯ ಬಡಿತ ಸಮಸ್ಯೆ (ಹಾರ್ಟ್ ರಿದಮ್ ಡಿಸಾರ್ಡರ್) ಎಂದರೆ ವ್ಯಕ್ತಿಯ ಹೃದಯ ಬಡಿತ ಅತ್ಯಂತ ನಿಧಾನ ಅಥವಾ ಅತ್ಯಂತ ವೇಗವಾಗಿ ಆಗುವುದು. ವಿಪರೀತ ಆಯಾಸ, ಪ್ರಜ್ಞೆ ತಪ್ಪುವ ಸಾಧ್ಯತೆಯೂ ಇದೆ. ತಜ್ಞವೈದ್ಯರ ಉಪಚಾರ ಅತ್ಯಗತ್ಯ. ಕೆಲವೊಮ್ಮೆ ಪೇಸ್‌ಮೇಕರ್ ಕೂಡ ಅಳವಡಿಸಬೇಕಾಗುವುದು. ಅಲ್ಲದೆ 'ಎಲೆಕ್ಟ್ರೋ ಫಿಸಿಯಾಲಜಿಸ್ಟ್' ಈ ಸಮಸ್ಯೆಗೆ ಸೂಕ್ತ ಚಿಕಿತ್ಸೆ ನೀಡಬಲ್ಲರು.

'ಹಾರ್ಟ್ ರಿದಮ್ ಸಮಸ್ಯೆ ಇದ್ದವರಲ್ಲಿ ರಕ್ತವನ್ನು ಹೃದಯದಿಂದ ಇತರ ಅಂಗಗಳಿಗೆ ಸರಬರಾಜು ಮಾಡುವಲ್ಲಿ ವಿಫಲವಾಗುತ್ತದೆ. ದೇಹದ ಇತರ ಭಾಗಗಳ ಸಮಗ್ರ ಕಾರ್ಯನಿರ್ವಹಣೆಗೆ ಅಗತ್ಯವಿರುವಷ್ಟು ರಕ್ತವನ್ನು ಪಂಪ್ ಮಾಡುವಲ್ಲಿ ಹೃದಯ ವಿಫಲವಾದಾಗ ಅನೇಕ ಸಮಸ್ಯೆಗಳು ಉಂಟಾಗುತ್ತವೆ. ಹೃದಯದಲ್ಲಿನ ಮಾಂಸಖಂಡಗಳು ಸರಿಯಾಗಿ ಕೆಲಸ ಮಾಡದೇ ಇದ್ದಾಗಲೂ ಹೃದಯದಲ್ಲಿ ಅನಿಯಮಿತ ಬಡಿತ ಉಂಟಾಗುತ್ತದೆ. ವಯಸ್ಸಾದವರಲ್ಲಿ ಏರು ರಕ್ತದೊತ್ತಡ, ಹೃದಯದ ಮಾಂಸಖಂಡಗಳಲ್ಲಿ ಸೋಂಕು ಉಂಟಾಗುವುದು,

> **ಕಾರಣಗಳೇನು?**
>
> - ಸೋಂಕು ಅಥವಾ ಜ್ವರ
> - ದೈಹಿಕ ಮತ್ತು ಮಾನಸಿಕ ಒತ್ತಡ
> - ಅನಿಮಿಯಾ ಅಥವಾ ಥೈರಾಯ್ಡ್ ಸಮಸ್ಯೆ ಇದ್ದರೆ
> - ಡ್ರಗ್ಸ್ ಅಥವಾ ಬೇರೆ ಯಾವುದಾದರೂ ಉನ್ಮಾದ, ಪ್ರಚೋದನಾತ್ಮಕ ವಸ್ತುವನ್ನು ತೆಗೆದುಕೊಂಡರೆ

ಅನುವಂಶೀಯ ತೊಂದರೆಗಳು.. ಇದ್ದರೆ ಹೃದಯ ಬಡಿತ ಅನಿಮಿಯವಾಗುತ್ತದೆ. ವಾರ, ತಿಂಗಳು ಕಳೆದಂತೆ ಈ ಸಮಸ್ಯೆ ಹೆಚ್ಚುತ್ತಲೇ ಹೋಗಿ ರೋಗಿಯ ಜೀವಕ್ಕೇ ಅಪಾಯವಾಗುವ ಸಾಧ್ಯತೆ ಇದೆ' ಎಂದು ಹೇಳುತ್ತಾರೆ ಬೆಂಗಳೂರಿನ ಹೃದ್ರೋಗ ಮತ್ತು ಹಾರ್ಟ್ ರಿದಮ್ ತಜ್ಞ ಡಾ. ವಾಸುದೇವ ಕಾಮತ್.

'ಹೃದಯ ಬಡಿತ ಏರುಪೇರು ಆದರೆ ಮುಂದೆ ಅದು ಹೃದಯ ವೈಫಲ್ಯ (ಹಾರ್ಟ್ ಫೇಲ್ಯೂರ್)ಕ್ಕೆ ಕಾರಣವಾಗಬಹುದು. ಹೃದಯಾಘಾತ, ಹತೋಟಿ ಇರದ ರಕ್ತದೊತ್ತಡ ಮತ್ತು ಇದಕ್ಕೆ ಪದೇ ಪದೇ ಸೇವಿಸುವ ಔಷಧಿಗಳು, ಮಧುಮೇಹ, ಹೃದಯ ಸ್ನಾಯುಗಳಿಗೆ ಸೋಂಕು ಮುಂತಾದವು ಹೃದಯ ಮೇಲೆ ಗಂಭೀರ ಪರಿಣಾಮ ಬೀರುತ್ತವೆ' ಎಂದು ಎಚ್ಚರಿಸುತ್ತಾರೆ ಅವರು.

ಹೃದಯ ಬಡಿತ ಪ್ರಕ್ರಿಯೆಯಲ್ಲಿ ಏರುಪೇರು ಆದಾಗ ಸಮಸ್ಯೆ ಉಂಟಾಗುತ್ತದೆ. ಇದನ್ನು ಆರ್ಹೈತ್ಮಿಯಾ (arrhythmia) ಎಂದು ಕರೆಯಲಾಗುವುದು.

### ಅನುವಂಶಿಕ ತೊಂದರೆ ಇದ್ದರೆ

'ಕರ್ನಾಟಕದಲ್ಲಿ ಹೃದಯ ಬಡಿತ ಸಮಸ್ಯೆ ಇರುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ವ್ಯಾಯಾಮದ ಕೊರತೆ, ಬೊಜ್ಜು, ಬದಲಾದ ಜೀವನಶೈಲಿ, ಫಾಸ್ಟ್‌ಫುಡ್‌ಗಳ ಹಾವಳಿ, ಮಧುಮೇಹ ಮುಂತಾದವುಗಳಿಂದ ಹೃದಯ ರೋಗಿಗಳೂ ಹೆಚ್ಚುತ್ತಿದ್ದಾರೆ. ಆದರೂ ಇಂದು ವೈದ್ಯಕೀಯ ವಿಜ್ಞಾನ ಸಾಕಷ್ಟು ಅತ್ಯಾಧುನಿಕವಾಗಿದ್ದರಿಂದ ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗಳಿಗೆ ಉತ್ತಮ ವೈದ್ಯಕೀಯ ಸೌಲಭ್ಯಗಳೂ ಇವೆ. ಆದರೆ ಇದನ್ನು ತಜ್ಞ ವೈದ್ಯರೇ ಮಾಡಬೇಕು' ಎನ್ನುತ್ತಾರೆ ಈ ವೈದ್ಯರು.

ಹೃದಯ ವೈಫಲ್ಯವೂ ಇತ್ತೀಚೆಗೆ ಹೆಚ್ಚಾಗಿ ಜನರನ್ನು ಕಾಡುತ್ತಿದೆ. ಉಸಿರಾಟದ ತೊಂದರೆ, ಮಧ್ಯರಾತ್ರಿ ಎಚ್ಚರವಾಗುವುದು, ನಡೆದಾಡಲು ತೊಂದರೆ, ಮೆಟ್ಟಿಲು ಹತ್ತಲು ಆಗದಂಥ ಪರಿಸ್ಥಿತಿ. ಆಯಾಸವಾಗುವುದು, ಕಾಲುಗಳಲ್ಲಿ ಸೆಳೆತ, ನಿತ್ರಾಣ ಮತ್ತು ವಿಪರೀತ ನಿಶ್ಶಕ್ತಿ ಮುಂತಾದವು ಇದರ ಲಕ್ಷಣ.

'ಈ ಸಮಸ್ಯೆ ಬಂದ ಕೂಡಲೇ ತಜ್ಞ ವೈದರಿಂದ ತಪಾಸಣೆ ಮಾಡಿಸಿಕೊಳ್ಳಬೇಕು. ಇಸಿಜಿ, 2ಡಿ ಇಕೊಕಾರ್ಡಿಯಾಲಜಿ, ಹೃದಯ ಸ್ಕ್ಯಾನಿಂಗ್ ಇಮೇಜ್ ತೆಗೆಯುವ ಮೂಲಕ, ರಕ್ತಪರೀಕ್ಷೆ.. ಮುಂತಾದ ಸಾಧನಗಳ ಮೂಲಕ ಇದನ್ನು ಪತ್ತೆ ಹಚ್ಚಬಹುದು. ಹೃದಯ ವೈಫಲ್ಯ ಅಪಾಯಕಾರಿ. ಶೇ.50ರಷ್ಟು ಮಂದಿ ಹೃದಯ ವೈಫಲ್ಯ ಆದವರು ಹೆಚ್ಚೆಂದರೆ ಮುಂದಿನ ಐದು ವರ್ಷ ಬದುಕಿ ಉಳಿಯಬಹುದು. ರೋಗಿಗಳು ಪದೇ ಪದೇ ಆಸ್ಪತ್ರೆಗೆ ದಾಖಲಾಗಬೇಕಾಗುತ್ತದೆ ಎಂದು ಹೇಳುತ್ತಾರೆ ಅವರು.

### ಚಿಕಿತ್ಸೆ ಏನು?

ಹೃದಯಕ್ಕೆ ತೊಂದರೆ ಆದ ತಕ್ಷಣ ಆಸ್ಪತ್ರೆಗೆ ಹೋಗಿ ತಜ್ಞರಿಂದ ತಪಾಸಣೆ ಮಾಡಿಸಿಕೊಳ್ಳಬೇಕು, ಕ್ಲಪ್ತ ಕಾಲದಲ್ಲಿ ಸೂಕ್ತ ಚಿಕಿತ್ಸೆ, ಇದಕ್ಕೆ ಕಾರ್ಡಿಯಾಕ್ ರಿಸಿಂಕ್ರೊನೈಸೇಷನ್ ಥೆರಪಿ ಮೂಲಕ ಚಿಕಿತ್ಸೆ ನೀಡಲಾಗುತ್ತದೆ. ■